## ಅಡಿಕೆ ಹಾಳೆಯ ಚಪ್ಲಿ!

'ಅಡಿಕೆ ಹಾಳೆ'ಯನ್ನು ಸಾಮಾನ್ಯವಾಗಿ ಬೆಂಕಿ ಹೊತ್ತಿಸಲು ಉಪಯೋಗಿಸುವುದೇ ಹೆಚ್ಚಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವಿಭಿನ್ನ ಉದ್ದೇಶಗಳಿಗಾಗಿ ಇದರ ಬಳಕೆಯಾಗುತ್ತಿದೆ. ತರಹೇವಾರಿ ವಸ್ತುಗಳನ್ನು ಸಹ ಸಿದ್ಧಪಡಿಸಲಾಗುತ್ತಿದೆ. ಅಂದರೆ ಅಡಿಕೆ ಹಾಳೆಯಿಂದ ಊಟದ ಪ್ಲೇಟ್, ದೊನ್ನೆ, ಹೂವಿನ ರೀತಿ ಕಾಣುವ ಸೃಜನಾತ್ಮಕ ಕಲೆಯನ್ನೂ ತಯಾರಿಸಲಾಗುತ್ತದೆ. ಅವುಗಳ ಸಾಲಿನಲ್ಲೀಗ 'ಚಪ್ಪಲಿ'ಯನ್ನು ಕಾಣಬಹುದು. ವಿನೂತನವಾಗಿ ಸಿದ್ಧಪಡಿಸಿದ ಈ ಅಡಿಕೆ ಹಾಳೆಯ ಚಪ್ಪಲಿಯು ಸ್ವರ್ಣವಲ್ಲಿ ಮಠದ ಕೃಷಿ ಜಯಂತಿಯಲ್ಲಿ ಪ್ರದರ್ಶನಕ್ಕೆ ಇಡಲಾಗಿತ್ತು. ಇದು ಅಲ್ಲಿ ನೆರೆದಿದ್ದವರೆಲ್ಲರ ಆಕರ್ಷಣೆಗೆ ಒಳಗಾಗಿತ್ತು.

–ಗಣಪತಿ ಹಾಸ್ಪುರ, ಯಲ್ಲಾಪುರ



## ಸಂಪಿಗೆ ಹಣ್ಣು!

ಮಾರ್ಚ್‌ನಿಂದ ಜೂನ್‌ವರೆಗೆ ವೈವಿಧ್ಯಮಯ ಕಾಡಿನ ಹಣ್ಣುಗಳನ್ನು ಕಾಡು ಸಮೀಪದ ಊರುಗಳಲ್ಲಿ ನೋಡಬಹುದು. ಈ ಚಿತ್ರದಲ್ಲಿ ಕಾಣುತ್ತಿರುವುದು ಸಂಪಿಗೆ ಹಣ್ಣು. ಹುಳಿಸಿಹಿ ಮಿಶ್ರಿತ ರುಚಿ ಇರುವ ಈ ಹಣ್ಣು ಗಿಡಮರದಲ್ಲಿ ಬಿಟ್ಟಿರುವುದನ್ನು ನೋಡುವುದೇ ಚೆಂದ. ಮರದ ತುಂಬೆಲ್ಲ ಕೆಂಪಗೆ ಗೊಂಚಲು ಗೊಂಚಲಾಗಿ ಹಣ್ಣು ಬಿಟ್ಟಿರುತ್ತದೆ. ಇದರ ಜೊತೆಗೆ ಈ ಬೇಸಿಗೆಯಲ್ಲಿ ಕೌಳಿ ಹಣ್ಣು, ನುರುಕಲು ಹಣ್ಣು, ಚಳ್ಳೆ ಹಣ್ಣು, ಮುಳ್ಳು ಹಣ್ಣು, ದಾಸವಾಳಹಣ್ಣು, ಬಿಕ್ಕೆ ಹಣ್ಣು, ಹಲಗೆ ಹಣ್ಣು (ಬಳ್ಳಿಯಲ್ಲಿ ಬಿಡುವುದು), ನೇರಲೆ ಹಣ್ಣು, ಹಲಗೇರಿ ಹಣ್ಣು, ಪರಗಿ ಹಣ್ಣು, ಹುಳಿಪಿಚ್ಚೆ ಹಣ್ಣು, ಒಟ್ಮಡ್ಕೆ ಹಣ್ಣು, ರಂಜಲು ಹಣ್ಣು ಇತ್ಯಾದಿ ಹೆಸರೆ ಈಗ ಮರೆಯಾಗುವಂಥ ಹಣ್ಣುಗಳು ನಾನು ಶಾಲೆಗೆ ಹೋಗುವ ದಿನಗಳಲ್ಲಿ ಸಿಗುತ್ತಿತ್ತು.



ಈಗ ಇಂಥ ಹಣ್ಣುಗಳ ಮರಗಳ ಸಂತತಿಯೂ ಮರೆಯಾಗುತ್ತಿದೆ. ಈಚೆಗೆ ಉತ್ತರಕನ್ನಡದ ಸಿದ್ದಾಪುರ ತಾಲ್ಲೂಕಿನ ಶಿರಗೋಡುಬೈಲ್ ಎಂಬ ಕಾಡು ಮಧ್ಯದ ಊರಿಗೆ ಹೋಗಿ ಬರುವಾಗ ಈ ಸಂಪಿಗೆ ಹಣ್ಣು ಮರದಲ್ಲಿ ಬಿಟ್ಟಿರುವುದು ಕಂಡುಬಂತು. ಬಾಲ್ಯದ ನೆನಪು ಮರುಕಳಿಸಿತು. ಯಾರೋ ಕಡಿದ ಮರದ ರೆಂಬೆಯು ಕೆಳಗೆ ಬಿದ್ದುದುರಿಂದ ನಮಗೂ ಹಣ್ಣು ಸವಿಯಲು ಸಾಧ್ಯವಾಯಿತು. ಈಗಿನ ಮಕ್ಕಳಿಗೆ ಇಂಥ ಹಣ್ಣುಗಳ ಪರಿಚಯವೂ ಇಲ್ಲ. ಕಾಡಿನಲ್ಲಿ ಇಂಥ ಹಣ್ಣುಗಳು ಕಾಣೆಯಾಗುತ್ತಿರುವುದರಿಂದ ಮಂಗಗಳೂ ಕಾಡಿನಿಂದ ನಾಡಿಗೆ ಆಹಾರಕ್ಕಾಗಿ ದಾಳಿ ಇಡುತ್ತಿವೆ!

–ಗಣಪತಿ ಶಿರಳಗಿ, ಸಾಗರ



## ಮಾಜಿ ಸೈನಿಕರ ಪುನೀತ ಪ್ರೇಮ!

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಮ್ಮನ್ನು ಅಗಲಿ ಹಲವು ತಿಂಗಳುಗಳೇ ಕಳೆದಿವೆ. ಅಪ್ಪು ದೈಹಿಕವಾಗಿ ನಮ್ಮಿಂದ ದೂರವಾಗಿದ್ದರೂ ಮಾನಸಿಕವಾಗಿ ಎಲ್ಲರ ಮನದಾಳದಲ್ಲಿ ಅಜರಾಮರರಾಗಿದ್ದಾರೆ. ಮಾರ್ಚ್ 17 ಪುನೀತ್ ರಾಜ್‌ಕುಮಾರ್ ಜನ್ಮದಿನವಾಗಿತ್ತು. ಈ ನಿಟ್ಟಿನಲ್ಲಿ ಅನ್ನಸಂತರ್ಪಣೆ, ನೇತ್ರದಾನ, ರಕ್ತದಾನ, ರಸ್ತೆ, ಕಟ್ಟಡ, ವಾಹನಗಳಿಗೆ ಪುನೀತ್ ಹೆಸರು ನಾಮಕರಣ ಎಲ್ಲ ಕಡೆ ನಡೆದಿದ್ದು, ಹಲವೆಡೆ ಪುನೀತ್ ರಾಜ್‌ಕುಮಾರ್ ಪ್ರತಿಮೆಗಳ ಅನಾವರಣ ಮಾಡಲಾಯಿತು. ಈ ಕಾರ್ಯಕ್ಕೆ ವಿಜಯನಗರ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕು ಸಹ ಹೊರತಾಗಿಲ್ಲ. ಕೂಡ್ಲಿಗಿ ತಾಲ್ಲೂಕು–ಬೆಂಗಳೂರು ರಸ್ತೆಯಲ್ಲಿ ಮಾಜಿ ಸೈನಿಕರೆಲ್ಲರೂ ಸೇರಿಕೊಂಡು ಪುನೀತ್ ಪುತ್ಥಳಿಯನ್ನು ಅನಾವರಣ ಮಾಡಿ ಅಭಿಮಾನ ಮೆರೆದರು.

ಇದೊಂದು ಮುಗ್ಧ ನಗುವಿನ ಪುತ್ಥಳಿಯಾಗಿದ್ದು, ನಿವೃತ್ತ ಸೈನಿಕರಷ್ಟೇ ಅಲ್ಲದೆ ಸ್ಥಳೀಯರಿಂದಲೂ ದೇಣಿಗೆ ಸಂಗ್ರಹ ಮಾಡಿ ಪುತ್ಥಳಿ ಸ್ಥಾಪಿಸಲಾಗಿದೆ. ಬಂಗಾರದ ಮನುಷ್ಯನ ಮಗನಿಗೆ ಬಂಗಾರದ ಬಣ್ಣದ ಸ್ಪರ್ಶವನ್ನು ನೀಡಲಾಗಿದೆ. ಈ ರಸ್ತೆಯನ್ನು ಡಾಕ್ಟರ್ ಪುನೀತ್ ರಾಜ್‌ಕುಮಾರ್ ರಸ್ತೆ ಎಂದೂ ನಾಮಕರಣ ಮಾಡಲಾಗಿದೆ. ಈ ಪುತ್ಥಳಿಕಾರ್ಯ ಅಭಿಮಾನಿಗಳು ಪುನೀತ್ ರಾಜ್‌ಕುಮಾರ್ ಮೇಲೆ ತೋರುವ ಅಪಾರ ಅಭಿಮಾನವನ್ನು ಪ್ರತಿನಿಧಿಸುತ್ತದೆ.

–ದೀಪಶ್ರೀ ಎಸ್. ಕೂಡ್ಲಿಗಿ, ವಿಜಯನಗರ

### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly